**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ**

**SC No**. 8/2023

ಫಿರ್ಯಾದಿ – ಸರ್ಕಾರ – ಅಂಕೋಲಾ ಪೋಲೀಸ ಠಾಣೆ

**ವಿರುದ್ಧ**

ಆರೋಪಿ – ವಿಘ್ನೇಶ್ವರ ತಂದೆ ಬುದವಂತ ಗೌಡ ಮತ್ತು ಇತರೆ 3 ಜನರು

**ದೋಷಾರೋಪಣೆ**

ಶ್ರೀ ಡಿ. ಎಸ್. ವಿಜಯ ಕುಮಾರ. ಬಿ.ಎಸ್.ಸಿ., ಎಲ್.ಎಲ್.ಬಿ., ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ , ಕಾರವಾರ ಆದ ನಾನು

**ಆರೋಪಿತರುಃ–**

1. ವಿಘ್ನೇಶ್ವರ ತಂದೆ ಬುದವಂತ ಗೌಡ,
   ಪ್ರಾಯಃ 39 ವರ್ಷ,
   ವೃತ್ತಿಃ ಸರಕಾರಿ ಶಿಕ್ಷಕ,
   ಸಾಃ ಹಂದಿಗದ್ದೆ, ಬೆಳಸೆ, ಅಂಕೋಲಾ.
2. ಶ್ಯಾಮಲಾ ಕೋಂ ರವಿ ಗೌಡ,
   ಪ್ರಾಯಃ 28 ವರ್ಷ,
   ವೃತ್ತಿಃ ಮನೆ ಕೆಲಸ,
   ಸಾಃ ಹಂದಿಗದ್ದೆ, ಬೆಳಸೆ, ಅಂಕೋಲಾ.
3. ರವಿ ತಂದೆ ಬುದವಂತ ಗೌಡ,
   ಪ್ರಾಯಃ 38 ವರ್ಷ,
   ವೃತ್ತಿಃಕೋಳಿ ಫಾರ್ಮ,
   ಸಾಃ ಹಂದಿಗದ್ದೆ, ಬೆಳಸೆ, ಅಂಕೋಲಾ.
4. ಸಾವಿತ್ರಿ ಕೋಂ ಬುದವಂತ ಗೌಡ,
   ಪ್ರಾಯಃ 65 ವರ್ಷ,
   ವೃತ್ತಿಃ ಮನೆ ಕೆಲಸ,
   ಸಾಃ ಹಂದಿಗದ್ದೆ, ಬೆಳಸೆ, ಅಂಕೋಲಾ.

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ಮೊದಲನೆಯದಾಗಿ, ಅಂಕೋಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ಬೆಳಸೆ ಹಂದಿಗದ್ದೆಯಲ್ಲಿ ವಾಸವಾಗಿರುವ 1 ನೇ ಆರೋಪಿ ವಿಘ್ನೇಶ್ವರ ತಂದೆ ಬುದವಂತ ಗೌಡ ಈತನಿಗೆ ಫಿರ್ಯಾದಿ ಗುರು ಹಮ್ಮು ಗೌಡ ಇವರ ತಂಗಿಯಾದ ಯಮುನಾ ಗೌಡ ಇವಳೊಂದಿಗೆ ದಿನಾಂಕಃ 25.05.2022 ರಂದು ಮಾದನಗೇರಿಯ ಮಹಾಲಸಾ ಸಿದ್ದಿ ವಿನಾಯಕ ದೇವಸ್ಥಾನದಲ್ಲಿ ಸಂಪ್ರದಾಯಬದ್ಧವಾಗಿ ಮದುವೆ ಮಾಡಿ ಕೊಟ್ಟಿದ್ದು, ಮದುವೆಯಾದ 3 ತಿಂಗಳ ನಂತರ 1 ನೇ ಆರೋಪಿಯಾದ ನೀನು ನಿನ್ನ ತಮ್ಮ 3 ನೇ ಆರೋಪಿ ರವಿ ಬುದವಂತ ಗೌಡ ಈತನ ಹೆಂಡತಿಯಾದ 2 ನೇ ಆರೋಪಿ ಶ್ಯಾಮಲಾ ಕೋಂ ರವಿ ಗೌಡ ಇವಳೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿರುವುದನ್ನು ಫಿರ್ಯಾದಿಯ ತಂಗಿ ಮೃತ ಯಮುನಾ ಗೌಡ ಇವಳು ಕಣ್ಣಾರೆ ನೋಡಿ ಆ ಬಗ್ಗೆ 1 ರಿಂದ 4 ನೇ ಆರೋಪಿಗಳಾದ ನಿಮ್ಮನ್ನು ಕೇಳಿದ್ದಕ್ಕೆ ಸಿಟ್ಟಿನಿಂದ 1 ರಿಂದ 4 ನೇ ಆರೋಪಿಗಳು ಸೇರಿಕೊಂಡು ಮೃತ ಯಮುನಾ ಗೌಡ ಇವಳಿಗೆ ಹೊಡೆದು ಬಡೆದು ಮಾಡಿ ಮಾನಸಿಕವಾಗಿ ಕಿರುಕುಳ ನೀಡಿದ್ದು ಮತ್ತು ಸದರಿ ವಿಷಯವನ್ನು ಮೃತ ಯಮುನಾ ವಿಘ್ನೇಶ್ವರ ಗೌಡ ಇವಳು ತನ್ನ ಅಣ್ಣ ಪ್ರಕರಣದ ಫಿರ್ಯಾದಿಯವರಿಗೆ ತಿಳಿಸಿದಾಗ ಫಿರ್ಯಾದಿಯವರು 15 ನೇ ಸಾಕ್ಷಿಯಾದ ಮಹೇಶ ರಾಮಾ ಗೌಡ ಇವರೊಂದಿಗೆ ನಿಮ್ಮ ಮನೆಗೆ ಬಂದು ನಿಮಗೆ ತಿಳುವಳಿಕೆ ನೀಡಿದ್ದರೂ ಸಹಾ ಆರೋಪಿಗಳಾದ ನೀವುಗಳು ಮೃತ ಯಮುನಾ ಗೌಡ ಇವಳಿಗೆ ಕಿರುಕುಳ ನೀಡಿ, "ನೀನು ಈ ಮನೆಯಲ್ಲಿ ಇರುವುದು ಬೇಡ, ನೀನು ಎಲ್ಲಿಯಾದರೂ ಹೋಗಿ ಸಾಯಿ, ನಿನ್ನಿಂದ ತಮಗೆ ನೆಮ್ಮದಿ ಇಲ್ಲಾ" ಅಂತಾ ಬೈದು ತೊಂದರೆ ಕೊಟ್ಟು ಮಾನಸಿಕವಾಗಿ ಹಾಗೂ ದೈಹಿಕವಾಗಿ ಕಿರುಕುಳ ನೀಡಿ, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 498(ಎ) ಸಹವಾಚಕ ಕಲಂ 34 ರನ್ವಯ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ .

ಎರಡನೆಯದಾಗಿ, ಆರೋಪಿಗಳಾದ ನೀವು ನೀವು ಏಕೋದ್ದೇಶದಿಂದ/ಸಮಾನ ಉದ್ದೇಶದಿಂದ ಸಂಗನಮತ ಮಾಡಿಕೊಂಡು ಬಂದು, ಮೃತ ಯಮುನಾ ಗೌಡ ಇವಳಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿ ಆತ್ಮಹತ್ಯೆಗೆ ದುಷ್ಪ್ರೇರಣೆ ನೀಡಿದ್ದರಿಂದಲೇ ಅದನ್ನೇ ಮನಸ್ಸಿಗೆ

ಹಚ್ಚಿಕೊಂಡು ಜೀವನದಲ್ಲಿ ಜಿಗುಪ್ಸೆಗೊಂಡ ಮೃತ ಯಮುನಾ ಗೌಡ ಇವಳು ತನ್ನ ಸಾವಿನಿಂದ ಯಾರಿಗೂ ತೊಂದರೆ ಆಗಬಾರದು ಎನ್ನುವ ಉದ್ದೇಶದಿಂದ "ನನ್ನ ಸಾವಿಗೆ ನಾನೇ ಕಾರಣ" ಅಂತಾ ಒಂದು ಹಾಳೆಯಲ್ಲಿ ಬರೆದಿಟ್ಟು ದಿನಾಂಕಃ 05-12-2022 ರಂದು 11.00 ಘಂಟೆಯಿಂದ 12.00 ಘಂಟೆಯ ಅವಧಿಯಲ್ಲಿ ತನ್ನ ಮನೆಯ ಮಾಳಿಗೆಯಲ್ಲಿರುವ ತನ್ನ ರೂಮಿನಲ್ಲಿ ಹಂಚಿನ ಮೇಲ್ಛಾಣಿಯ ಪಕಾಸಿಗೆ ಬಿಳಿಯ ಬಣ್ಣದ ವೇಲ್‌ನಿಂದ ಕುತ್ತಿಗೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡು ಮೃತಪಡಲು ನೀವೇ ಕಾರಣೀಕರ್ತರಾಗಿರುತ್ತೀರಿ. ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 306 ಸಹವಾಚಕ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ .

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ..

ದಿನಾಂಕಃ 09-10-2023

(ಡಿ. ಎಸ್. ವಿಜಯ ಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .

**<u>ಪ್ರಧಾನ ಜಿಲ್ಲಾ  ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ</u>**

<u>**SC No**. 8/2023</u>

ಫಿರ್ಯಾದಿ – ಸರ್ಕಾರ – ಅಂಕೋಲಾ ಪೋಲೀಸ ಠಾಣೆ

**ವಿರುದ್ಧ**

ಆರೋಪಿ – ವಿಘ್ನೇಶ್ವರ ತಂದೆ ಬುದವಂತ ಗೌಡ  ಮತ್ತು ಇತರೆ 3 ಜನರು

**<u>ದೋಷಾರೋಪಣೆ</u>**

| | |
|---|---|
| 1 ನೇ ಆರೋಪಿಯ ಹೆಸರು | ಃ ವಿಘ್ನೇಶ್ವರ ಗೌಡ, |
| ತಂದೆಯ ಹೆಸರು | ಃ ಬುದವಂತ ಗೌಡ, |
| ವಯಸ್ಸು | ಃ 40 ವರ್ಷ, |
| ಉದ್ಯೋಗ | ಃ ಸರಕಾರಿ ಶಿಕ್ಷಕ, |
| ವಾಸ | ಃ ಹಂದಿಗದ್ದೆ, ಬೆಳಸೆ, ಅಂಕೋಲಾ. |

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೇ?
ಉತ್ತರಃ  ಹೌದು

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿಯಾ?
ಉತ್ತರಃ ಇಲ್ಲ, ವಿಚಾರಣೆ ಆಗಬೇಕು

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 09-10-2023

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ</u>**

**<u>SC No</u>**<u>. 8/2023</u>

ಫಿರ್ಯಾದಿ – ಸರ್ಕಾರ – ಅಂಕೋಲಾ ಪೋಲೀಸ ಠಾಣೆ

**ವಿರುದ್ಧ**

ಆರೋಪಿ – ವಿಘ್ನೇಶ್ವರ ತಂದೆ ಬುದವಂತ ಗೌಡ ಮತ್ತು ಇತರೆ 3 ಜನರು

**<u>ದೋಷಾರೋಪಣೆ</u>**

| | |
|---|---|
| 2 ನೇ ಆರೋಪಿಯ ಹೆಸರು | ಃಶ್ಯಾಮಲಾ ಗೌಡ, |
| ತಂದೆಯ ಹೆಸರು | ಃರವಿ ಗೌಡ, |
| ವಯಸ್ಸು | ಃ39 ವರ್ಷ, |
| ಉದ್ಯೋಗ | ಃಮನೆ ಕೆಲಸ, |
| ವಾಸ | ಃಹಂದಿಗದ್ದೆ, ಬೆಳಸೆ, ಅಂಕೋಲಾ. |

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೇ?
ಉತ್ತರಃ ಹೌದು

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿಯಾ?
ಉತ್ತರಃ ತಪ್ಪು ಮಾಡಿಲ್ಲ

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 09 -10-2023

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ</u>**

**<u>SC No</u>**<u>. 8/2023</u>

ಫಿರ್ಯಾದಿ – ಸರ್ಕಾರ – ಅಂಕೋಲಾ ಪೋಲೀಸ ಠಾಣೆ

**ವಿರುದ್ಧ**

ಆರೋಪಿ – ವಿಘ್ನೇಶ್ವರ ತಂದೆ ಬುದವಂತ ಗೌಡ ಮತ್ತು ಇತರೆ 3 ಜನರು

**<u>ದೋಷಾರೋಪಣೆ</u>**

| | |
|---|---|
| 3 ನೇ ಆರೋಪಿಯ ಹೆಸರು | : ರವಿ ಗೌಡ, |
| ತಂದೆಯ ಹೆಸರು | : ಬುದವಂತ ಗೌಡ, |
| ವಯಸ್ಸು | : 39 ವರ್ಷ, |
| ಉದ್ಯೋಗ | : ಕೋಳಿ ಫಾರ್ಮ, |
| ವಾಸ | : ಹಂದಿಗದ್ದೆ, ಬೆಳಸೆ, ಅಂಕೋಲಾ. |

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೇ?
ಉತ್ತರಃ ಹೌದು

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿಯಾ?
ಉತ್ತರಃ ತಪ್ಪು ಮಾಡಿಲ್ಲ

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 09-10-2023

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ**

**SC No**. 8/2023

ಫಿರ್ಯಾದಿ – ಸರ್ಕಾರ – ಅಂಕೋಲಾ ಪೋಲೀಸ ಠಾಣೆ

**ವಿರುದ್ಧ**

ಆರೋಪಿ – ವಿಘ್ನೇಶ್ವರ ತಂದೆ ಬುದವಂತ ಗೌಡ ಮತ್ತು ಇತರೆ 3 ಜನರು

**ದೋಷಾರೋಪಣೆ**

| | |
|---|---|
| 4 ನೇ ಆರೋಪಿಯ ಹೆಸರು | ಃಸಾವಿತ್ರಿ ಗೌಡ, |
| ತಂದೆಯ ಹೆಸರು | ಃಬುದವಂತ ಗೌಡ, |
| ವಯಸ್ಸು | ಃ62 ವರ್ಷ, |
| ಉದ್ಯೋಗ | ಃಮನೆ ಕೆಲಸ, |
| ವಾಸ | ಃಹಂದಿಗದ್ದೆ, ಬೆಳಸೆ, ಅಂಕೋಲಾ. |

**ಆರೋಪಿಯ ಹೇಳಿಕೆ**

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೇ?
ಉತ್ತರಃ ಹೌದು

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿಯಾ?
ಉತ್ತರಃ ಸುಳ್ಳು

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 09-10-2023

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .